ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) ಹೌದು

ಆ) ಗ್ರಂಥಾಲಯಕ್ಕೆ ಸೂಕ್ತ ನಿವೇಶನ ಇಲ್ಲದಿರುವುದರಿಂದ ಗ್ರಂಥಾಲಯ ಕಟ್ಟಡ ನಿರ್ಮಿಸಿರುವುದಿಲ್ಲ. ನಿವೇಶನ ದೊರಕಿದ ನಂತರ ಗ್ರಂಥಾಲಯ ಕಟ್ಟಡವನ್ನು ನಿರ್ಮಿಸುವ ಕಾರ್ಯ ಕೈಗೊಳ್ಳಲಾಗುವುದು. ಸಧ್ಯಕ್ಕೆ ಬಾಡಿಗೆ ಕಟ್ಟಡದಲ್ಲಿ ಗ್ರಂಥಾಲಯ ಸೇವೆ ನೀಡಲಾಗುತ್ತದೆ.

ತಾಲ್ಲೂಕು ಮಟ್ಟದ ಗ್ರಂಥಾಲಯಗಳಿಗೆ ಗ್ರಂಥಪಾಲಕರ ಹುದ್ದೆ ಇರುವುದಿಲ್ಲ. ಆದರೆ ಗ್ರಂಥಾಲಯ ಸಹಾಯಕರ ಹುದ್ದೆ ಇದ್ದು, ಆ ಸಿಬ್ಬಂದಿಯಿಂದಲೇ ಗ್ರಂಥಾಲಯ ಕಾರ್ಯ ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ನಿವೇಶನ ಇಲ್ಲ, ಅಲ್ಲಿ ಗ್ರಂಥಾಲಯವನ್ನು ಪ್ರಾರಂಭ ಮಾಡಲು ಹೇಳಿದ್ದಾರೆ. ನಾನು ಅಲ್ಲಿ ನಿವೇಶನವನ್ನು ಇನ್ನು 15 ದಿವಸಗಳಲ್ಲಿ ಒದಗಿಸಿ ಕೊಡುತ್ತೇನೆ. ತಾವು ಯಾವಾಗ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು) : ಮಾನ್ಯ ಅಧ್ಯಕ್ಷರೇ, ಸೂಕ್ತವಾದ ನಿವೇಶನವನ್ನು ಒದಗಿಸಿ ಕೊಟ್ಟರೆ ನಾನು ತುರ್ತಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮೊದಲು ನಿವೇಶನ ಒದಗಿಸಿಕೊಡಬೇಕು ಆಮೇಲೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ತುರ್ತಾಗಿ ಪರಿಶೀಲನೆ ಮಾಡುತ್ತಾರೆ.

ಕಾಲೇಜು ವಿದ್ಯಾರ್ಥಿಗಳಿಗೆ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ತರಬೇತಿ.

338 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಲೇಜು ವಿದ್ಯಾರ್ಥಿಗಳಿಗಾಗಿ ಕಡ್ಡಾಯವಾಗಿ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ತರಬೇತಿಯನ್ನು ಜಾರಿಗೆ ತರಲು ಯಾವುದಾದರೂ ಸಮಿತಿಯನ್ನು ಸರ್ಕಾರವು ರಚಿಸಿದೆಯೇ?

ಆ) ಹಾಗಿದ್ದಲ್ಲಿ ಸಮಿತಿಯನ್ನು ಎಂದು ರಚಿಸಲಾಯ್ತು ಹಾಗೂ ಯಾವಾಗ ತನ್ನ ವರದಿಯನ್ನು ಸಲ್ಲಿಸುವುದು?

ಇ) ಬಹಳ ಹಿಂದೆ ಎನ್.ಸಿ.ಸಿ ಮತ್ತು ಎನ್.ಎಸ್.ಎಸ್.ನ್ನು ಕಡ್ಡಾಯ ಮಾಡಿದ್ದನ್ನು ಕೈಬಿಡಲಾಗಿದೆ ಎಂಬುದು ಸರ್ಕಾರದ ಗಮನದಲ್ಲಿದೆಯೇ?

ಈ) ಎನ್.ಎಸ್.ಎಸ್. ಅನ್ನು-2ನೇ ಹಂತದಲ್ಲಿ ಕಡ್ಡಾಯಗೊಳಿಸಲು ಬೇಕಾಗುವ ಹಣವೆಷ್ಟು?

ಉ) ಹೆಣ್ಣು ಮಕ್ಕಳಿಗೂ ಸಹ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ನ್ನು ಕಡ್ಡಾಯ ಮಾಡಲಾಗುವುದೆ?

ಊ) ಈ ಹೆಚ್ಚುವರಿ ವೆಚ್ಚವನ್ನು ಕೇಂದ್ರವು ಭರಿಸಲು ಒಪ್ಪಿದೆಯೇ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಕ್ರಿಯಾ ಯೋಜನಾ ಸಮಿತಿಯನ್ನು ರಚಿಸಿದೆ.

ಆ) ದಿನಾಂಕ 24-7-97 ರಂದು ರಚಿಸಲಾಗಿದೆ. ಸಮಿತಿಯು ತನ್ನ ವರದಿಯನ್ನು ಇಷ್ಟರಲ್ಲಿಯೇ ಸರ್ಕಾರಕ್ಕೆ ಸಲ್ಲಿಸುವುದು.

ಇ) ಹೌದು

ಈ) ರೂಪಾಯಿ 540 ಲಕ್ಷಗಳು

ಉ) ಈ ಬಗ್ಗೆ ಪರಿಶೀಲಿಸಲಾಗುವುದು

ಊ) ಈ ಬಗ್ಗೆ ಕೇಂದ್ರ ಸರ್ಕಾರವನ್ನು ಸಂಪರ್ಕಿಸಲಾಗುವುದು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ದೇಶದಲ್ಲಿ ದೇಶಭಕ್ತಿ ಮೂಡಿಸಬೇಕಾದರೆ, ವಿದ್ಯಾರ್ಥಿಗಳಿಗೆ ಎನ್.ಸಿ.ಸಿ ಮತ್ತು ಎನ್.ಎಸ್.ಎಸ್ ಇವು ಬಹಳ ಮುಖ್ಯವಾದವು. ನಾವು ಸ್ವಾತಂತ್ರ್ಯದ ಹಿನ್ನೆಲೆಯನ್ನು ನೋಡಿದಾಗ ಮೊದಲು ನಮ್ಮಲ್ಲಿ ಸೇವಾದಳ ಎಂದು ಇತ್ತು. ಅದಾದ ಮೇಲೆ ದೇಶಭಕ್ತಿಯನ್ನು ಮೂಡಿಸತಕ್ಕಂಥ ಯಾವ ಕಾರ್ಯಕ್ರಮ ಸಹ ಇಲ್ಲ. ಈ ಬಗ್ಗೆ ವಿದ್ಯಾರ್ಥಿಗಳಿಗೆ ಒಂದು ತರಬೇತಿಯನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈ ಬಗ್ಗೆ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಮೌಲ್ಯಗಳು ಕುಸಿಯುತ್ತಾ ಬಿದ್ದಿವೆ. ದೇಶ ಪ್ರೇಮ ಕಡಿಮೆಯಾಗುತ್ತಿದೆ. ಶಿಸ್ತು ಕಡಿಮೆಯಾಗುತ್ತಿದೆ, ಈ ಎಲ್ಲಾ ಅನುಭವದ ಆಧಾರದ ಮೇಲೆ ಹೊಸದಾಗಿ ನಮ್ಮ ರಾಜ್ಯದಲ್ಲಿ ಇರುವ ಶಿಕ್ಷಣ ಸಂಸ್ಥೆಗಳಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಬೇಕಾದರೆ ಈ ಎನ್.ಸಿ.ಸಿ ಮತ್ತು ಎನ್.ಎಸ್.ಎಸ್. ಇಂತಹ ಚಟುವಟಿಕೆಗಳು ಅವಶ್ಯಕತೆ ಇವೆ ಎಂದು ಮನಗಂಡು ಈ ವರ್ಷದಿಂದ ಕಡ್ಡಾಯ ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದೇವೆ. ಇದಕ್ಕೋಸ್ಕರ ನಾವು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಇದಕ್ಕೆ ಯಾವ ರೀತಿ ರೂಪರೇಷೆಗಳನ್ನು ಕೊಡಬೇಕು ಈ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆನ್ನುವ ಉದ್ದೇಶದಿಂದ ಮಾಡಿದ್ದೇವೆ ಇಷ್ಟರಲ್ಲಿಯೇ ಆ ಸಮಿತಿ ನಮಗೆ ವರದಿಯನ್ನು ಕೊಡುತ್ತದೆ. ಆ ವರದಿಯ ಮೇಲೆ ಸರ್ಕಾರ ಇದನ್ನು ಕಡ್ಡಾಯ ಮಾಡಿ ಆದಷ್ಟು ಬೇಗ ನಮ್ಮ ರಾಜ್ಯದಲ್ಲಿ ಈ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದೆ.